ಸರ್ಕಾರಿ ಬಂಗಲೆಗಳ ರಿಪೇರಿ ಖರ್ಚು

544 (751) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಸಚಿವರ ಬಂಗಲೆಗಳ ನವೀಕರಣ ರಿಪೇರಿ ಇತ್ಯಾದಿಗಳಿಗೆ ವೆಚ್ಚವಾದ ಹಣವೆಷ್ಟು; (ಕಳೆದ ಎರಡು ವರ್ಷಗಳ ಅವಧಿಯ ಸಚಿವರ ಬಂಗಲೆವಾರು ವಿವರ ನೀಡುವುದು);

ಆ) ಕೈಗೊಂಡ ಕಾಮಗಾರಿಗಳಿಗೆ ಹೆಚ್ಚು ವೆಚ್ಚವನ್ನು ತೋರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪ್ರತಿಯೊಬ್ಬ ಸಚಿವರ ಬಂಗಲೆಗಳಿಗೆ ಇಂತಿಷ್ಟು ಹಣವನ್ನು ಮಾತ್ರ ನವೀಕರಣ, ರಿಪೇರಿಗೆ ಖರ್ಚು ಮಾಡಬೇಕೆಂಬ ನಿಯಮ ಇದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರಿನಲ್ಲಿರುವ ಸಚಿವರ ಬಂಗಲೆಗಳ ನವೀಕರಣ ರಿಪೇರಿ ಇತ್ಯಾದಿಗಳಿಗೆ ವೆಚ್ಚವಾದ ಹಣವನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ) ಬಂದಿದೆ.

ಇ) ಪ್ರತಿಯೊಬ್ಬರ ಸಚಿವರ ಬಂಗಲೆಗಳಿಗೆ ಇಂತಿಷ್ಟು ಹಣವನ್ನು ಮಾತ್ರ ನವೀಕರಣ, ರಿಪೇರಿಗೆ ಖರ್ಚು ಮಾಡಬೇಕೆಂಬ ನಿಯಮ ಇರುವುದಿಲ್ಲ. ಆದರೂ ಸಚಿವರ ಬಂಗಲೆಗಳ ನವೀಕರಣ ಮತ್ತು ದುರಸ್ತಿ ಕಾಮಗಾರಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಹಾಗೂ ಸಚಿವರುಗಳ ಕೋರಿಕೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ.

ಅನುಬಂಧ–1

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೆಂಗಳೂರಿನಲ್ಲಿರುವ ಸಚಿವರ ಬಂಗಲೆಗಳ ನವೀಕರಣ, ರಿಪೇರಿ, ಇತ್ಯಾದಿಗಳಿಗೆ ವೆಚ್ಚ ಮಾಡಿದ ವಿವರಗಳು

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಖಾತೆಗಳ ವಿವರಗಳು	ವಸತಿಗೃಹ	ಸಿವಿಲ್ ಕಾಮಗಾರಿಯ ವೆಚ್ಚದ ವಿವರ
1	2	3	4
1	ಮಾನ್ಯ ಮುಖ್ಯ ಮಂತ್ರಿಗಳು	ರೇಸ್ ವ್ಯೂ ಕಾಟೇಜ್ ರೇಸ್ ಕೋರ್ಸ್ ರಸ್ತೆ	158.24
2	ಮಾನ್ಯ ಕಂದಾಯ ಸಚಿವರು	ರೇಸ್ ವ್ಯೂ ಬಿಲ್ಡಿಂಗ್, ರೇಸ್ ಕೋರ್ಸ್ ರಸ್ತೆ	98.73
3	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು	ಕಾವೇರಿ, ಕೆ.ಕೆ. ರಸ್ತೆ.	10.12
4	ಮಾನ್ಯ ಮಾಜಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು	ಕೆ.ಕೆ.ಸೌತ್–1	38.85
5	ಮಾನ್ಯ ಮಾಜಿ ಇಂಧನ ಸಚಿವರು	ಕೆ.ಕೆ.ಸೌತ್–2	5.10
6	ಮಾನ್ಯ ಲೋಕೋಪಯೋಗಿ ಸಚಿವರು	ಕೆ.ಹೆಚ್.ಬಿ. ನಂ.02, ಕ್ರಿಸೆಂಟ್ ರಸ್ತೆ	26.25
7	ಮಾನ್ಯ ಸಣ್ಣ ನೀರಾವರಿ ಯೋಜನೆ ಸಚಿವರು	ಕೆ.ಹೆಚ್.ಬಿ. ನಂ.03, ಕ್ರಿಸೆಂಟ್ ರಸ್ತೆ	23.13

8	ಮಾನ್ಯ ಮುಖ್ಯ ಮಂತ್ರಿಯವರ ಅಧಿಕೃತ ನಿವಾಸ	ಅನುಗ್ರಹ	59.32
9	ಮಾನ್ಯ ಗೃಹ ಸಚಿವರು	ಕೆ.ಹೆಚ್.ಬಿ. ನಂ.04, ಕ್ರಿಸೆಂಟ್ ರಸ್ತೆ	0.00
10	ಮಾನ್ಯ ಕೃಷಿ ಮಾರುಕಟ್ಟೆ ಸಚಿವರು	ನಂ.30, ಸ್ಯಾಂಕಿ ರಸ್ತೆ	26.91
11	ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು	ನಂ.31, ಸ್ಯಾಂಕಿ ರಸ್ತೆ	6.57
12	ಮಾನ್ಯ ಕಾರ್ಮಿಕ ಸಚಿವರು	ಎ–2 ಜಯಮಹಲ್ ಬಡಾವಣೆ	29.20
13	ಮಾನ್ಯ ಜವಳಿ ಮತ್ತು ಯುವಜನ ಸೇವಾ ಸಚಿವರು	ಬಿ–5 ಜಯಮಹಲ್ ಬಡಾವಣೆ	16.40
14	ಮಾನ್ಯ ಸಮಾಜ ಕಲ್ಯಾಣ ಸಚಿವರು	ನಂ.1, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	34.87
15	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	ನಂ.3, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	3.26
16	ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು	ನಂ.4, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	26.56
17	ಮಾನ್ಯ ಮಾಜಿ ವಸತಿ ಮತ್ತು ಮುಜರಾಯಿ ಸಚಿವರು	ನಂ.6, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	0.00

18	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು	ನಂ.7, ಸಪ್ತಸಚಿವರ ವಸತಿಗೃಹ, ಸ್ಯಾಂಕಿ ರಸ್ತೆ	23.12
ಒಟ್ಟು			**586.63**

ರೈತರ ಸಾಲಕ್ಕೆ ಸ್ಟಾಂಪ್ ಶುಲ್ಕ ರದ್ದು

545 (752) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009–10ರಲ್ಲಿ ಎಷ್ಟು ರೈತರಿಗೆ ಸಹಕಾರ ಸಂಘಗಳ ಬ್ಯಾಂಕು, ಡಿ.ಸಿ.ಸಿ. ಬ್ಯಾಂಕು ಇತ್ಯಾದಿಗಳ ಮೂಲಕ ಸಾಲ ನೀಡಲಾಗಿದೆ?

ಆ) ಈ ಸಾಲದ ಅಂದಾಜು ಮೊತ್ತವೆಷ್ಟು?

ಇ) ರೈತರು ತೆಗೆದುಕೊಳ್ಳುವ ಸಾಲಕ್ಕೆ ಸಂಬಂಧಪಟ್ಟಂತೆ ಶೇಕಡಾ ಎಷ್ಟು ಸ್ಟಾಂಪ್ ಶುಲ್ಕ ಪಾವತಿಸಬೇಕಾಗಿದೆ?

ಈ) ಈ ಸ್ಟಾಂಪ್ ಶುಲ್ಕವನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಲಕ್ಷ್ಮಣ.ಸವದಿ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ 2009–10ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2009 ರಿಂದ 28.02.2010 ರವರೆಗೆ 10,96,086 ಜನ ರೈತರಿಗೆ ಕೃಷಿ ಪತ್ತಿನ ಸಹಕಾರ ಸಂಘಗಳ ಮತ್ತು ಡಿಸಿಸಿ ಬ್ಯಾಂಕುಗಳ ಮೂಲಕ ಕೃಷಿ ಸಾಲ ವಿತರಿಸಲಾಗಿದೆ.

ಆ) 2009–10 ನೇ ಸಾಲಿನಲ್ಲಿ ಅಂದರೆ ದಿನಾಂಕ: 01.04.2009 ರಿಂದ 28.02.2010 ರವರೆಗೆ ರೂ.3099.40 ಕೋಟಿಗಳಷ್ಟು ಕೃಷಿ ಸಾಲ ವಿತರಿಸಲಾಗಿದೆ.

ಇ) ಕರ್ನಾಟಕ ಸರ್ಕಾರ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಕಂ.ಇ.ಮುನೋಮ. 2002 (1) ದಿ: 3/4/–5–05ರಲ್ಲಿ ನೀಡಿರುವ ಆದೇಶದ ಮೇರೆಗೆ ಕೃಷಿ ಉದ್ದೇಶದ ಪರಿಭಾಷೆಯಲ್ಲಿ ಬರುವ ಎಲ್ಲಾ ಚಟುವಟಿಕೆಗಳಿಗೆ ನೀಡುವ ಸಾಲಗಳ ಬಗ್ಗೆ ಬರೆದುಕೊಡುವ ದಸ್ತಾವೇಜುಗಳಿಗೆ ಪೂರ್ಣ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ ನೀಡಿ